**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

# ಓ.ಎಸ್.253/2021

**ಪಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:14.07.2025**

**ಪಾಟೀ ಸವಾಲು : ಪ್ರತಿವಾದಿ ನಂ. 1, 2 ಮತ್ತು 4 ಪರ ವಕೀಲರಿಂದ : -**

ನಾನು ನಾರಾಯಣಕೆರೆ ಗ್ರಾಮದಲ್ಲಿ ವಾಸ ಮಾಡುತ್ತಿರುತ್ತೇನೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಭಾವಚಿತ್ರದಲ್ಲಿರುವ ಮನೆಯಲ್ಲೆ ನಾನು ವಾಸ ಮಾಡುತ್ತಿರುತ್ತೇನೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು **ನಿ.ಡಿ.10** ಎಂದು ಗುರುತಿಸಲಾಯಿತು. ನಿ.ಪಿ.11 ರಲ್ಲಿ ಪ್ರತಿವಾದಿ ನಂ.1, 2 ಮತ್ತು 4 ರವರ ಹೆಸರುಗಳು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಪೋಲಿಸ್ ಠಾಣೆಯವರು ಪ್ರತಿವಾದಿ ನಂ.1, 2 ಮತ್ತು 4 ರವರ ಹೆಸರುಗಳನ್ನು ನಮೂದು ಮಾಡದೇ ತಪ್ಪು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.11 ಕ್ಕೆ ಸಂಬಂಧಪಟ್ಟಂತೆ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ನ್ಯಾಯಾಲಯದಿಂದ ಕ್ರಯಪತ್ರ ಆಗಿರುತ್ತದೆ. ನ್ಯಾಯಾಲಯದಿಂದ ಕ್ರಯಪತ್ರ ಆದ ತಕ್ಷಣ ಖಾತೆ ಆಗಿರುತ್ತದೆ. ಸಾಕ್ಷಿಯು ಸ್ವತಃ ಮುಂದುವರೆದು, ನ್ಯಾಯಾಲಯದಿಂದ ಕ್ರಯಪತ್ರ ಆದ ಸ್ವಲ್ಪ ಸಮಯದ ನಂತರ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಕ್ರಯಪತ್ರ ಮಾಡಿದವರು ತಹಶಿಲ್ದಾರ್ ರವರ ಬಳಿ ಆರ್.ಆರ್.ಟಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಆದ್ದರಿಂದ ಖಾತೆ ತಡವಾಗಿರುತ್ತದೆ. ನ್ಯಾಯಾಲಯದ ಕಡತದಲ್ಲಿರುವ ಒಂದು ಮ್ಯುಟೇಶನ್ ಎಕ್ಸಾಕ್ಟ್ ಪ್ರತಿಯನ್ನು ಸಾಕ್ಷಿಗೆ ತೋರಿಸಿ, ಸದರಿ ದಾಖಲೆಯಲ್ಲಿ ಆರ್.ಆರ್.ಟಿ ಪ್ರಕರಣದ ನಂಬರ್ ನಮೂದಾಗಿರುತ್ತದೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು **ನಿ.ಡಿ.11** ಎಂದು ಗುರುತಿಸಲಾಯಿತು. ನಿ.ಪಿ.12 ರಲ್ಲಿರುವ ದೂರನ್ನು ನಾನೇ ನೀಡಿರುತ್ತೇನೆ. ನಿ.ಪಿ.12 ರಲ್ಲಿ ಪ್ರತಿವಾದಿ ನಂ.1, 2 ಮತ್ತು 4 ರವರ ಹೆಸರು ಇರುವುದಿಲ್ಲ ಎಂದರೆ ಸರಿ. ನಿ.ಪಿ.12 ರ ಜೊತೆ ಪೋಲಿಸ್ ಠಾಣೆಯಲ್ಲಿ ನಾನು ಸ್ಕೆಚ್ ಅನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.13 ರಲ್ಲೂ ಪ್ರತಿವಾದಿ ನಂ.1, 2 ಮತ್ತು 3 ರವರ ಹೆಸರು

ಇರುವುದಿಲ್ಲ ಎಂದರೆ ಸರಿ. ನಿ.ಪಿ.13 ರ ಜೊತೆ ನಾನು ಸ್ಕೆಚ್ ಅನ್ನು ಪೋಲಿಸ್ ಠಾಣೆಗೆ ಹಾಜರುಪಡಿಸಿರುವುದಿಲ್ಲ. ನಿ.ಪಿ.14 ರ ಪ್ರಕಾರ ಪ್ರತಿವಾದಿ ನಂ.4 ರವರು ನನ್ನ ವಿರುದ್ಧ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.14 ರಲ್ಲಿ ಪ್ರತಿವಾದಿ ನಂ.4 ರವರು ಯಾರ ವಿರುದ್ಧ ದೂರು ಕೊಟ್ಟಿರುತ್ತಾರೆ ಎಂದು ಓದಿ ಹೇಳಿ ಎಂದರೆ ಸಾಕ್ಷಿಯು ನಿ.ಪಿ.14 ಸಣ್ಣ ಅಕ್ಷರಗಳಿರುತ್ತವೆ, ಆದ್ದರಿಂದ ನನಗೆ ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ದೊಡ್ಡಹಿರಿಯಪ್ಪ. ನಿ.ಪಿ.14 ರಲ್ಲಿ ನಾಗರಾಜ್ ಬಿನ್ ಗಿರಿಯಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಠಾಣೆಯವರು ತಪ್ಪಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ದಾಖಲೆಯನ್ನು ಹಾಕುವ ಮುನ್ನಾ ಪರೀಕ್ಷೆ ಮಾಡಿ ಹಾಜರುಪಡಿಸಿರುತ್ತೇನೆ. ನಿ.ಪಿ.14 ಲ್ಲಿ ನನ್ನ ತಂದೆಯ ಹೆಸರು ತಪ್ಪಾಗಿದೆ ಎಂದು ನಾನು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಿ.ಪಿ.18 ರಿಂದ 20 ರಲ್ಲಿ ಯಾವ ಜಮೀನಿನ ಛಾಯಾಚಿತ್ರಗಳು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.22 ಮತ್ತು 23 ರಲ್ಲಿ ಸರ್ವೆ ನಂ.223/ಪಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರ್ ಅನ್ನು ಒಟ್ಟುಗೂಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಒಟ್ಟಾಗಿ 13 ಎಕರೆ 15 ಗುಂಟೆ ಜಮೀನನ್ನು ಒಟ್ಟುಗೂಡಿಸಿರುತ್ತಾರೆ. ನಾನು ಹೇಳಿದ ರೀತಿಯಲ್ಲಿ ನಿ.ಪಿ.22 ಮತ್ತು 23 ರಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಈ ದಾವೆಯನ್ನು ಹೂಡುವ ಸಮಯದಲ್ಲಿ ಓ.ಎಸ್.223/2011 ರ ಪ್ರಕಾರ ನನಗೆ ಕ್ರಯಪತ್ರವಾಗಿರುತ್ತದೆ ಎಂದರೆ ಸರಿ. ಓ.ಎಸ್.223/2011 ರ ದಾವಾದಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಇರಬಹುದು. ಓ.ಎಸ್.223/11 ರಲ್ಲಿ ನಮೂದಾಗಿರುವ ಮುನಿಯಮ್ಮ ನನ್ನ ಮಾರಾಟಗಾರರು ಆಗಿರುತ್ತಾರೆ. ನನಗೆ ಮುನಿಯಮ್ಮನವರ ಮಕ್ಕಳು ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಮುನಿಯಮ್ಮನವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಓ.ಎಸ್.223/2011 ರಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಓ.ಎಸ್.223/2011 ರ ನನ್ನ ಹೇಳಿಕೆಯಲ್ಲಿ ನನಗೆ ಜಮೀನಿನ ಸ್ವಾಧೀನವನ್ನು ಬಿಟ್ಟುಕೊಡಿ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಸರ್ವೆ ನಂ.223 ರಲ್ಲಿ

ಎಷ್ಟು ಜನ ಖರೀದಿದಾರರ ಚಕ್ಕುಬಂದಿಗಳು ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕ್ರಯಪತ್ರದಲ್ಲಿ ಕ್ರಯಪತ್ರ ಆಗಿರುವ ದಿನದಂದೆ ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಯನ್ನು ನನಗೆ ನ್ಯಾಯಾಲಯದಿಂದ ಯಾವಾಗ ಸ್ವಾಧೀನ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮೊದಲಿನಿಂದಲೂ ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಾಗಲೀ, ಅಥವಾ ಮೊದಲು ಹೂಡಿದ ದಾವೆಯಲ್ಲಾಗಲೀ, ನಾನೇ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನಾನು 2007 ರಲ್ಲಿ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇನೆ. ನಾನು ಈ ದಾವೆಯಲ್ಲಾಗಲೀ, ಓ.ಎಸ್.223/2011 ರಲ್ಲಾಗಲೀ, 2007 ರಿಂದ ಸ್ವಾಧೀನದಲ್ಲಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ ಮತ್ತು ಅದರ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1, 2 ಮತ್ತು 4 ರವರು ಸ್ವಾಧೀನದಲ್ಲಿರುವ ಜಮೀನಿಗೆ ದಾವಾ ಸ್ವತ್ತು ಎಂದು ಪರಿಗಣಿಸಿ ಅವರಿಗೆ ತೊಂದರೆ ಕೊಡಲು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದುರುದ್ದೇಶದಿಂದ ಬೇರೆಯವರ ಮಾತನ್ನು ಕೇಳಿ, ಸತ್ಯ ಸಂಗತಿಯನ್ನು ಮರೆಮಾಚಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**